ಬಿಜಾಪುರ ಜಿಲ್ಲೆಯಲ್ಲಿ ವಿದ್ಯುತ್ ವಿತರಣಾ ಘಟಕಗಳನ್ನು ಸ್ಥಾಪಿಸುವ ಬಗ್ಗೆ

07 (195) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯಲ್ಲಿರುವ ವಿದ್ಯುತ್ ವಿತರಣಾ ಸಬ್ ಸ್ಟೇಷನ್‌ಗಳ ಸಂಖ್ಯೆ ಎಷ್ಟು ಎಲ್ಲೆಲ್ಲಿ ಸ್ಥಾಪಿಸಲಾಗಿದೆ ಇವುಗಳ ಸಾಮರ್ಥ್ಯ ಎಷ್ಟು

ಆ) ಇವುಗಳಲ್ಲದೇ ಬಸವನಬಾಗೇವಾಡಿ ಕ್ಷೇತ್ರದ

1) ಮುತ್ತಗಿ–33 ಕೆ ವಿ ಸ್ಟೇಷನ್ 2) ಮಟ್ಟಿಹಾಳ – 110 ಕೆ ವಿ ಸ್ಟೇಷನ್ 3) ಕೊಲ್ಲಾರ – 33 ಕೆ ವಿ ಸ್ಟೇಷನ್ ಇವುಗಳ ನಿರ್ಮಾಣ ಕಾರ್ಯ ಯಾವ ಹಂತದಲ್ಲಿವೆ

ಇ) ಇದುವರೆಗೆ ಇದಕ್ಕಾಗಿ ಕೈಗೊಂಡಿರುವ ಕ್ರಮಗಳೇನು ಯಾವಾಗ ಪೂರ್ಣಗಳಿಸಲಾಗುತ್ತದೆ

ಈ) ಈ 3 ನೂತನ ವಿದ್ಯುತ್ ಸಬ್ ಸ್ಟೇಷನ್‌ಗಳ ಹೊರತಾಗಿ ಈ ಕ್ಷೇತ್ರವ್ಯಾಪ್ತಿಯಲ್ಲಿ ಹೊಸದಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಸ್ಥಳಗಳಾವುವು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಬಿಜಾಪುರ ಜಿಲ್ಲೆಯಲ್ಲಿರುವ ವಿದ್ಯುತ್ ವಿತರಣಾ ಕೇಂದ್ರಗಳ ಒಟ್ಟು ಸಂಖ್ಯೆ 29 ವಿವರಗಳು ಈ ಕೆಳಕಂಡಂತಿವೆ

ಕ್ರಮ ಸಂಖ್ಯೆ	ಸ್ಥಳ	ವೋಲ್ಟೇಜ್ (ಕೆ ವಿ ಗಳಲ್ಲಿ)	ಸಾಮರ್ಥ್ಯ (ಎಂ ವಿ ಎ ಗಳಲ್ಲಿ)
1	ಬಸವನಬಾಗೇವಾಡಿ	220	200
2	ಬಿಜಾಪುರ	110	50
3	ಕೆ ಐ ಎ ಡಿ ಬಿ ಬಿಜಾಪುರ	100	30
4	ನಿಡಗುಂಡಿ	110	10
5	ಇಂಡಿ	110	50
6	ಝಳಕಿ	110	30
7	ಸಿಂದಗಿ	110	30
8	ಮೊರಟಗಿ	110	10
9	ಮಮದಾಪುರ	110	30
10	ಬೂತನಾಳ	33	10
11	ತಿಡಗುಂದಿ	33	5
12	ಒಬಲೇಶ್ವರ	33	15
13	ತಿಕೋಟಾ	33	10
14	ಮಲಘಾನ	33	10
15	ಚಡಚಣ	33	10

1	2	3	4
16	ಹೊರತಿ	33	5
17	ತಂಬಾ	33	10
18	ಲಚ್ಚಣ	33	10
19	ಧೂಳಖೇಡ	33	5
20	ನೇವರಗಿ	33	5
21	ಕಳಕೇರಿ	33	5
22	ಆಲಮೇಲ	33	5
23	ದೇವರ ಹಿಪ್ಪರಗಿ	33	7
24	ನಾಲತವಾಡ	33	10
25	ಮುದ್ದೇಬಿಹಾಳ	33	10
26	ತಾಳಿಕೋಟೆ	33	5
27	ಕೊರವಾರ್	33	10
28	ತಡವಲಗಾ	33	10
29	ದೇವರಗೆನ್ನೂರು	33	10
	ಒಟ್ಟು		**607**

ಆ) ಮತ್ತು ಇ) ಬಸವನಬಾಗೇವಾಡಿ ಕ್ಷೇತ್ರದ ಮುತ್ತಗಿ ಗ್ರಾಮದಲ್ಲಿ ಒಂದು 33 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಯ ನಿರ್ವಹಣೆಯನ್ನು ಟರ್ನ್ ಕೀ ಆಧಾರದಲ್ಲಿ ವಹಿಸಿಕೊಡುವ ಸಲುವಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು ಟೆಂಡರ್ ಪ್ರಕ್ರಿಯೆ ನಡೆದಿದೆ ಈ ಕಾಮಗಾರಿಯ ನಿರ್ವಹಣೆಗೆ ಬೇಕಾಗುವ ಹಣಕಾಸಿನ ವ್ಯವಸ್ಥೆಯನ್ನು ಮಾಡಲಾಗುತ್ತಿದೆ ಆಯ್ಕೆಗೊಂಡ ಗುತ್ತಿಗೆದಾರರಿಗೆ ಈ ಕಾಮಗಾರಿಯನ್ನು ವಹಿಸಿಕೊಟ್ಟು ಆದಷ್ಟು ಜಾಗ್ರತೆ ನಿರ್ಮಾಣ ಕಾರ್ಯಗಳನ್ನು ಪ್ರಾರಂಭಿಸಲಾಗುವುದು ಸದರಿ ಕ್ಷೇತ್ರದ ಮಟ್ಟಿಹಾಳ ಗ್ರಾಮದಲ್ಲಿ ಒಂದು 110 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸಲು ಬೇಕಾಗುವ ಭೂಮಿಯನ್ನು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದೆ ಈ ಯೋಜನೆಯ ಅಂದಾಜು ಪಟ್ಟಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ನಿರೀಕ್ಷಿಸಲಾಗುತ್ತಿದ್ದು, ಈ ಅಂದಾಜು ಪಟ್ಟಿಯನ್ನು ಪಡೆದ ನಂತರ, ಆರ್ಥಿಕ ಹೊಂದಾಣಿಕೆಯನ್ನು ಮಾಡಿಕೊಂಡು ನಿರ್ಮಾಣ ಕಾಮಗಾರಿಗಳ ನಿರ್ವಹಣೆಯ ಬಗ್ಗೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು

ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಲ್ಲಾರ ಗ್ರಾಮದಲ್ಲಿ ಒಂದು 33 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಸ್ಥಾಪಿಸುವ ಯಾವುದೇ ಪ್ರಸ್ತಾವನೆಯು ಸದ್ಯಕ್ಕೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಮುಂದೆ ಇರುವುದಿಲ್ಲ

ಈ) ಬಸವನ ಬಾಗೇವಾಡಿ ಕ್ಷೇತ್ರದ ವ್ಯಾಪ್ತಿಯಲ್ಲಿ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಈಗಾಗಲೇ ಆಡಳಿತಾತ್ಮಕ / ತಾಂತ್ರಿಕ ಅನುಮೋದನೆಯನ್ನು ನೀಡಲಾಗಿರುವ ಮೇಲಿನ ಎರಡು ಉಪ ಕೇಂದ್ರಗಳನ್ನು ಹೊರತುಪಡಿಸಿ, ಈ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮನಗೊಳಿ ಮತ್ತು ಹೂವಿನ ಹಿಪ್ಪರಗಿ ಗ್ರಾಮಗಳಲ್ಲಿ ತಲಾ ಒಂದು 33 ಕೆ ವಿ ವಿದ್ಯುತ್ ಉಪ ಕೇಂದ್ರವನ್ನು ಹಾಗೂ

ಶಿರಬೂರ್ ನಲ್ಲಿ ಒಂದು 110 ಕೆ ವಿ ವಿದ್ಯುತ್ ವಿತರಣಾ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಗಳಿಗೆ ಈಗಾಗಲೇ ಮಂಜೂರಾತಿಯನ್ನು ನೀಡಲಾಗಿರುತ್ತದೆ

ತುರುವೇಕೆರೆ ತಾಲ್ಲೂಕಿನಲ್ಲಿ ಹೆಚ್ಚುವರಿ ಟಿ.ಸಿ ಗಳ ಸ್ಥಾಪನೆಯ ಬಗ್ಗೆ

08 (169) ಶ್ರೀ ಲಕ್ಷ್ಮೀನಾರಾಯಣ ಎಂ ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆಯಿಂದ ಹೆಚ್ಚುವರಿ ಟಿ ಸಿ ಹಾಕಲು ಕೋರಿ ಬಂದ ಅರ್ಜಿಗಳೆಷ್ಟು ನಿರಾಕರಿಸಿರುವ ಅರ್ಜಿಗಳೆಷ್ಟು

ಆ) ಅವುಗಳನ್ನು ಪರಿಗಣಿಸಿ ಅಂದಾಜು ಪಟ್ಟಿ ತಯಾರು ಮಾಡಲಾಗಿದೆಯೇ

ಇ) ಎಷ್ಟು ವರ್ಷದಿಂದ ಬೇಡಿಕೆ ಇದೆ ವಿಳಂಬ ಮಾಡಲು ಕಾರಣವೇನು

ಈ) 3-4 ವರ್ಷದಿಂದ ಅರ್ಜಿ ಕೊಟ್ಟರೂ ಟಿ ಸಿ ಹಾಕದಿರಲು ಕಾರಣವೇನು

ಉ) ಯಾವಾಗ ಹೆಚ್ಚುವರಿ ಟಿ ಸಿ ಗಳನ್ನು ಅಳವಡಿಸಲಾಗುವುದು

ಊ) ವೋಲ್ಟೇಜ್ ಕಡಿಮೆ ಇರುವ ಕಡೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನಲ್ಲಿ ವೋಲ್ಟೇಜ್ ಕೊರತೆಯಿಂದ ಹೆಚ್ಚುವರಿ ಟಿ ಸಿ ಹಾಕಲು 4 ಅರ್ಜಿಗಳು ಬಂದಿರುತ್ತವೆ ಯಾವ ಅರ್ಜಿಗಳನ್ನು ನಿರಾಕರಿಸಿರುವುದಿಲ್ಲ

ಆ) ಸ್ವೀಕೃತವಾದ ಎಲ್ಲಾ ಅರ್ಜಿಗಳಿಗೆ ಅಂದಾಜು ಪಟ್ಟಿ ತಯಾರಿಸಲಾಗಿದೆ

ಇ) 9 ತಿಂಗಳುಗಳಿಂದ ಬೇಡಿಕೆ ಇದೆ ಈಗಾಗಲೇ 3 ಕೆಲಸಗಳು ಪ್ರಗತಿಯಲ್ಲಿವೆ ಉಳಿದ ಒಂದು ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು

ಈ) 3-4 ವರ್ಷಗಳ ಹಿಂದಿನ ಅರ್ಜಿಗಳು ಯಾವುದೂ ಬಾಕಿ ಇರುವುದಿಲ್ಲ

ಉ) ಮಾರ್ಚ್ 2004ರ ಅಂತ್ಯದೊಳಗೆ ಮೇಲಿನ ಹೆಚ್ಚುವರಿ ಟಿ ಸಿ ಗಳನ್ನು ಅಳವಡಿಸಲಾಗುವುದು

ಊ) ವೋಲ್ಟೇಜ್ ಕೊರತೆ ಇರುವ ಮತ್ತು ಅಧಿಕ ಒತ್ತಡ ಇರುವ ಕಡೆ ಹೆಚ್ಚುವರಿಯಾಗಿ 64 ಪರಿವರ್ತಕಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ ಈಗಾಗಲೇ ಜನವರಿ 2003 ರಿಂದ ಇಲ್ಲಿಯವರೆಗೆ 75 ಪರಿವರ್ತಕಗಳನ್ನು ಅಳವಡಿಸಲಾಗಿದೆ

ಹೆಚ್ ಕೆ ಡಿ ಬಿ ಹಾಗೂ ಎಂ ಎ ಡಿ ಬಿ ಗೆ ಬಿಡುಗಡೆ ಮಾಡಿರುವ ಹಣದ ಬಗ್ಗೆ

09 (199) ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು) ಮಾನ್ಯ ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2000-01 ರಿಂದ 2003-04 ರ ವರೆಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಬಯಲುಸೀಮೆ ಅಭಿವೃದ್ಧಿ ಮಂಡಳಿಗಳಿಗೆ ನಿಗಧಿಪಡಿಸಲಾದ ಹಾಗೂ ಬಿಡುಗಡೆ ಮಾಡಿದ ಹಣ ಎಷ್ಟು

ಆ) ಬಿಡುಗಡೆಯಾದ ಹಣದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ (ವಿವರವನ್ನು ವರ್ಷವಾರು ಮಂಡಳಿವಾರು ನೀಡುವುದು)?

ಶ್ರೀ ಡಿ ಬಿ ಚಂದ್ರೇಗೌಡ (ಕಾನೂನು ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು)